ಎಂ.ಎ. ಕುಮಾರ್, ಬೆಂಗಳೂರು
*ಉದ್ಯಾನವನಗಳೇ ಇಲ್ಲದಿದ್ದ ಪಕ್ಷದಲ್ಲಿ ಪ್ರೇಮಿಗಳು ಎಲ್ಲಿ ಸಂಧಿಸುತ್ತಿದ್ದರು?*



ಉದ್ಯಾನ್ ಎಕ್ಸ್‌ಪ್ರೆಸ್‌ನಲ್ಲಿ ಸಂಧಿಸುತ್ತಿದ್ದರು! ಲವ್ವಿಂದ ಏಲಾದವರಿಗೆ ಟ್ರೇನೂ ಒಂದೇ ಟ್ರೈನೂ ಒಂದೇ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ಮಧುಪಾನಿಗೂ, ಮದ್ಯಪಾನಿಗೂ ವ್ಯತ್ಯಾಸವೇನು ಸಾರ್?*
ಒಂದೇ ಅಕ್ಷರ ವ್ಯತ್ಯಾಸ; ಮಧುಪಾನಿಗೆ ತೋಟ ಇಷ್ಟ; ಮದ್ಯಪಾನಿಗೆ ಲೋಟ ಇಷ್ಟ.

ಎಚ್.ಆರ್. ದೇಸಾಯಿ, ರಾಯಚೂರು
*ಊಟದ ಮೊದಲ ತುತ್ತಿಗೂ, ಕೊನೆಯ ತುತ್ತಿಗೂ ಇರುವ ವ್ಯತ್ಯಾಸವೇನು?*
ತೇಗು.

ಎಸ್ಸೆನ್ಕೆ, ಕಡೂರು
*ಬುದ್ಧಿವಂತರು ಸಂತೋಷವಾಗಿರುವುದಿಲ್ಲವಂತೆ. ನೀವು ಸಂತೋಷವಾಗಿದ್ದೀರೇನು?*
ನಿಮ್ಮ ಸಂತೋಷದ ಮುಂದೆ ನನ್ನದೇನು ಮಹಾ ಬಿಡಿ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ; ಹೆಂಡತಿಗಿಂತ?*



ಬಂಧನವಿಲ್ಲ.

ಬೂಕನಕೆರೆ ವಿಜೇಂದ್ರ, ಮೈಸೂರು
*ತಿರುಪತಿ ತಿಮ್ಮಪ್ಪ ಸಾಲ ಮಾಡಿ ಮದುವೆಯಾದನಂತೆ?*
ನಿಜ. ರಾಕ್ಷಸಗಣಕ್ಕೆ ಸೇರಿದ್ದರೆ ವರದಕ್ಷಿಣೆ ಪಡೆಯಬಹುದಿತ್ತು; ಪಾಪ! ದೇವಗಣಕ್ಕೆ ಸೇರಿದುದರಿಂದ ಸಾಲ ಮಾಡಿದ.

ಎಚ್. ಆನಂದಕುಮಾರ್, ಚಿತ್ರದುರ್ಗ
*ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದದ್ದು ಹುಡುಗಿಯರು; ಪರೀಕ್ಷೆಗಳಲ್ಲಿ ಮುಂದಿರುವವರೂ ಅವರೇ. ಈ ದೇಶದ ಹುಡುಗರನ್ನು ಏನೆನ್ನಲಿ?*
ಹೆಣ್ಣನ್ನು ಹೆಜ್ಜೆಹೆಜ್ಜೆಗೂ ಮೆಚ್ಚುತ್ತಾ ಫಾಲೋ ಮಾಡುವವರು ಎನ್ನಿ.

ಬಿ.ಎನ್. ಸೊಲ್ಲಾಪುರ, ಬೀದರ
*ಢುಮ್ಕಿ ಹೊಡೆದವರು, ಹುಂಬರು, ರೌಡಿಗಳೇ ಹೆಚ್ಚಾಗಿ ಚುನಾವಣೆಗಳಲ್ಲಿ ಆಯ್ಕೆಯಾಗುತ್ತಾರಲ್ಲಾ...?*
ತಪ್ಪಿಲ್ಲ; ಇವರೆಲ್ಲ ಹಣಾಹಣಿಯಲ್ಲಿ ನುರಿತವರು; ಹಣಾಹಣಿಗೆ ಚಿತಾವಣೆಯ ಮಣೆಯೇ ಚುನಾವಣೆ.

ಪಿ.ಜೆ. ರಾಘವೇಂದ್ರ, ಮೈಸೂರು
*ಪುರುಷ... ಪೌರುಷ; ಮಹಿಳೆ....?*
ಮಹಿ+ಇಳೆ; ಎರಡು ಭೂಮಿಯ ತಾಳ್ಮೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಅಭ್ಯಾಸಕ್ಕೂ, ಹವ್ಯಾಸಕ್ಕೂ ವ್ಯತ್ಯಾಸ?*
ಸಭ್ಯ ನೋಟ ಬೀರುವುದು ಅಭ್ಯಾಸ; ಕದ್ದು ನೋಡುವುದು ಹವ್ಯಾಸ.

ಎಂ.ಕೆ. ರವಿಕಾಂತ, ತುಮಕೂರು
ದೇವಸ್ಥಾನ ಯಾವಾಗಲೂ ಎತ್ತರಪ್ರದೇಶದಲ್ಲಿ ಇರುವುದಕ್ಕೂ, ರಾಜಕಾರಣಿಗಳು ಎತ್ತರದ ಮನೆಯನ್ನೇ ಬಯಸುವುದಕ್ಕೂ ವ್ಯತ್ಯಾಸ?
ಅದು ಎಲ್ಲರಿಗೂ ತಲೆಯೆತ್ತಿದಾಗ ದರ್ಶನವಾಗಲೆಂದು; ಇದು ರೈಡ್ ಮಾಡುವವರು ಬಂದರೆ ದೂರದಿಂದಲೇ ಕಾಣಲೆಂದು.

ಕೆ.ಎಂ. ಲಿಂಗರಾಜು, ನಂಜನಗೂಡು
*ಅಧಿಕಾರವಿದ್ದಾಗ ದರ್ಪದಿಂದ ಮೆರೆಯುವ ರಾಜಕಾರಣಿಗಳು ಅಧಿಕಾರ ಹೋದಾಗ ಕಂಗಾಲಾಗುತ್ತಾರಲ್ಲಾ....?*
ಸಹಜವೇ. ನೀರಿನಲ್ಲಿ ಬಿದ್ದ ಪಟಾಕಿ ಬೀಡಿಗಿಂತ ಕಡೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಈ ಪ್ರಕೃತಿಯು ಹವಾಮಾನ ಇಲಾಖೆಯ ಮಾನ ಮರ್ಯಾದೆಗಳನ್ನು ಏಕೆ ಹಾಗೆ ಕಳೆಯುತ್ತದೆ ರಾಂ?*
ಪ್ರಕೃತಿ ಹೆಣ್ಣು; ಇಲಾಖೆ ಗಂಡು. ಗಂಡನ್ನು ಬೆಸ್ತು ಬೀಳಿಸುವುದು ಹೆಣ್ಣಿನ ಹವ್ಯಾಸ.

## ಬಹುಮಾನಿತ ಪ್ರಶ್ನೆ

ಪಿ. ಚಿದಾನಂದ, ಹಿರಿಯೂರು
*ಮನುಷ್ಯನ ಹುಟ್ಟು ಆಕಸ್ಮಿಕವೋ, ಅನಿವಾರ್ಯವೋ?*
ನಾರ್ಮಲ್ ಆಗುವುದು ಆಕಸ್ಮಿಕ, ಸಿಝೇರಿಯನ್ ಅನಿವಾರ್ಯ.

ಎಂಜಿ. ನೇಹವರ್ಷಿಣಿ, ಬಳ್ಳಾರಿ
*ಹೆಂಡತಿಯನ್ನು ಅರ್ಧಾಂಗಿ ಎನ್ನುತ್ತಾರೆ. ಗಂಡನನ್ನು?*
ಈಗಿನ ದೊಗಲೆ ಚೆಡ್ಡಿ ಯುಗದಲ್ಲಿ ಅರ್ಧ ಷರಾಯಿ ಎನ್ನಬಹುದು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಶನಿಕಾಟ ಎಂದು ಹೀಗಳೆಯುವ ಜನ ಶನಿದೇವರ ಗುಡಿಯ ಮುಂದೆ ಸಾಲುಗಟ್ಟಿ ನಿಲ್ಲುವುದೇಕೆ?*
ಸ್ಟ್ರಿಕ್ಟಾದ ಲೆಕ್ಚರರನ್ನು ದ್ವೇಷಿಸಿದರೂ ಇಂಟರ್ನಲ್ಸ್‌ನಲ್ಲಿ ತೊಂದರೆ ಆಗದಿರಲು ಗುಡ್ಮಾರ್ನಿಂಗ್ಸರ್ ಎನ್ನುವುದು ಅವಶ್ಯ.

ಮುರಲೀಧರ ಕುಲಕರ್ಣಿ, ಬೀದರ
*ಕಾಯಕವೇ ಕೈಲಾಸ ಎಂದರು ಬಸವಣ್ಣನವರು. ಲಂಚ ಹೊಡೆಯುವುದೂ ಒಂದು ಕಾಯಕವೇ ಅಲ್ಲವೆ?*



ಲಂಚ ಹೊಡೆಯುತ್ತಾರೆ; ಹೊಡೆಯುವುದು ಕಾಯಕವಲ್ಲ, ಕ್ರೌರ್ಯ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಭಾರತದ ಪೂಜಾರ್ಹ ಸರ್ಪಗಳು ಚೀನೀಯರ ಆಹಾರವಾಗಿವೆಯಲ್ಲಾ...?*
ಸಾಧ್ಯವೇ ಇಲ್ಲ. ಕಲ್ಲನಾಗರಗಳನ್ನು ಚೀನೀಯರೂ ಅರಗಿಸಿಕೊಳ್ಳಲಾರರು.

ಹಾಡ್ಯ ಬ. ಜಯಾನಂದ, ಮೈಸೂರು
*ವಾಸ್ತುಗೆ ತಳಹದಿ ವಿಜ್ಞಾನವೋ, ಮೂಢನಂಬಿಕೆಯೋ?*
ಎರಡೂ ಅಲ್ಲ, ಭವಿಷ್ಯದ ಬಗ್ಗೆ ಮುಗ್ಧರಿಗೆ ಇರುವ ಭಯ, ಆತಂಕ.

■ ರಾಮ್